# ಸಹ್ಯಾದ್ರಿ ಶಿಕ್ಷಣ ಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ

# ಕೃಷಿಯನ್ನು ಉದ್ಯಮವನ್ನಾಗಿಸಿದರೆ ಯುವಕರ ಆಕರ್ಷಣೆ

## ಡಾ। ಚೌಡಪ್ಪ ಪಿ.



ಮಂಗಳೂರು: ಸಹ್ಯಾದ್ರಿ ಶಿಕ್ಷಣ ಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ ಉದ್ಘಾಟನೆಗೊಂಡಿತು.

ಮಂಗಳೂರು, ಅ. 9: ಕೃಷಿಯೊಂದನ್ನು ಹೊರತುಪಡಿಸಿ ಉಳಿದೆಲ್ಲಾ ಕ್ಷೇತ್ರಗಳತ್ತ ಯುವಜನರು ಆಕರ್ಷಿತರಾಗುತ್ತಿರುವ ಇಂದಿನ ದಿನದಲ್ಲಿ ಕೃಷಿಯನ್ನು ಉದ್ಯಮ ವನ್ನಾಗಿಸಿಕೊಂಡು ಯುವಕರನ್ನು ಅದರತ್ತ ಸೆಳೆಯುವ ಅನಿವಾರ್ಯತೆ ಇದೆ ಎಂದು ಕಾಸರಗೋಡಿನ ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ। ಚೌಡಪ್ಪ ಪಿ. ಹೇಳಿದರು.

ಅಡ್ಯಾರು ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನ ಉದ್ಯಮಾಡಳಿತ ವಿಭಾಗದ ವತಿಯಿಂದ ಸಹ್ಯಾದ್ರಿ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ 'ವ್ಯವಸಾಯೋದ್ಯಮ ನಿರ್ವಹಣೆ: ಅವಕಾಶಗಳು ಮತ್ತುಸವಾಲುಗಳು' ಎಂಬ ವಿಷಯದ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

**ತೆಂಗು, ಅಡಿಕೆ, ಕೋಕೋ:** ತೋಟಗಾರಿಕಾ ಬೆಳೆಗಳಾಗಿ ಪ್ರಮುಖವಾಗಿ ಗುರುತಿಸಲ್ಪಡುವ ತೆಂಗು, ಅಡಿಕೆ, ಕೋಕೋಗಳಿಂದ ಮೌಲ್ಯಧಾರಿತ ಉತ್ಪನ್ನಗಳನ್ನು ತಯಾರಿಸುವಂತಾಗಬೇಕು. ತೆಂಗಿನ ನೂತನ ಉತ್ಪನ್ನವಾಗಿ ಚಿಪ್ಸ್, ಆರೋಗ್ಯಕರ ಪಾನೀಯವಾಗಿ ನೀರಾ ಮಾತ್ರವಲ್ಲದೆ ಕಚ್ಚಾ ತೆಂಗಿನ ಎಣ್ಣೆಯು ಇಂದು ವಿದೇಶಗಳಲ್ಲೂ ಹೆಸರು ಪಡೆಯುತ್ತಿದ್ದು, ಇಂತಹ ಲಾಭದಾಯಕ ಕೃಷಿ ಉದ್ಯಮಕ್ಕೆ ಯುವಕರನ್ನು ಪ್ರೋತ್ಸಾಹಿಸಬೇಕೆಂದು ಅವರು ಸಲಹೆ ನೀಡಿದರು.

**ತಂತ್ರಜ್ಞಾನಕ್ಕೆ ಒತ್ತು:** ಭಾರತ ಸರಕಾರದ ಕೃಷಿ ಸಚಿವಾಲಯದ ವ್ಯವಸಾಯೋದ್ಯಮ ಕೇಂದ್ರದ ನಿರ್ದೇಶಕ ಡಾ। ಪಿ. ಚಂದ್ರಶೇಖರ ಅವರು ಮಾತನಾಡಿ, ಕೃಷಿಗೆ ಪೂರಕವಾಗಿ ನಮ್ಮ ತಂತ್ರಜ್ಞಾನವನ್ನು ಬಲಪಡಿಸುವ ಹಾಗೂ ರೈತರಿಗೆ ದೊರೆಯುವಂತೆ ಮಾಡುವ ಅಗತ್ಯವಿದೆ ಎಂದರು.

### ಮೊಬೈಲ್‌ನಲ್ಲಿ ಸಿಗಲಿ ಮಾರುಕಟ್ಟೆ ಮಾಹಿತಿ

ಡಾ। ಪಿ. ಚಂದ್ರಶೇಖರ ಅವರು ಮಾತನಾಡಿ, ದೇಶದಲ್ಲಿ 70 ಕೃಷಿ ವಿಶ್ವವಿದ್ಯಾನಿಲಯಗಳ ಮೂಲಕ ನಾನಾ ರೀತಿಯ ಕೃಷಿ ತಂತ್ರಜ್ಞಾನಗಳನ್ನು ಆವಿಷ್ಕಾರಗೊಳಿಸಲಾಗುತ್ತಿದ್ದರೂ ಅದರ ಪ್ರಯೋಜನ ರೈತರಿಗೆ ಸಿಗುತ್ತಿಲ್ಲ. ಮಾಹಿತಿ ತಂತ್ರಜ್ಞಾನವಿಂದು ಎಲ್ಲ ಕ್ಷೇತ್ರಗಳಲ್ಲೂ ತನ್ನ ಪ್ರಭಾವ ಬೀರಿದ್ದರೂ ಕೃಷಿಕರ ಕಲ್ಯಾಣಕ್ಕಾಗಿ ಅದರಿಂದ ಏನು ಪ್ರಯೋಜನವಾಗಿದೆ ಎಂಬ ಬಗ್ಗೆ ಚರ್ಚೆಗೆ ಇದು ಸಕಾಲ. ಪ್ರತಿಯೊಬ್ಬ ರೈತರಲ್ಲೂ ಇಂದು ಮೊಬೈಲ್ ಬಳಕೆ ಸಾಮಾನ್ಯವಾಗಿದೆ. ಅದರ ಮೂಲಕ ಮಾರುಕಟ್ಟೆಯ ಮಾಹಿತಿಯನ್ನು ರೈತರಿಗೆ ಒದಗಿಸುವಂತಾಗಬೇಕು. ಕೃಷಿಯಲ್ಲಿ ಖಾಸಗಿ- ಸಾರ್ವಜನಿಕ ಸಹಭಾಗಿತ್ವಕ್ಕೆ ಒತ್ತು ನೀಡಬೇಕು. ತಮ್ಮ ಉತ್ಪನ್ನಗಳಲ್ಲಿ ಗುಣಮಟ್ಟವನ್ನು ಖಾತರಿಪಡಿಸಲು ರೈತರಿಗೆ ಮಾಹಿತಿ ನೀಡಬೇಕು ಎಂದು ಅವರು ಹೇಳಿದರು.

**ಕೃಷಿಯಿಂದ ಮಾತ್ರ ನೆಮ್ಮದಿ:** ಅಧ್ಯಕ್ಷತೆ ವಹಿಸಿದ್ದ ಭಂಡಾರಿ ಫೌಂಡೇಶನ್‌ನ ಅಧ್ಯಕ್ಷ ಡಾ। ಮಂಜುನಾಥ ಭಂಡಾರಿ ಮಾತನಾಡಿ, ಮನುಷ್ಯನ ಅತಿಯಾಸೆಯ ಕಾರಣದಿಂದಾಗಿ ಇಂದು ಪ್ರತಿಯೊಂದು ಸಂಸ್ಕೃತಿಯೂ ಉದ್ಯಮವಾಗಿ ಮಾರ್ಪಟ್ಟಿದೆ. ಹಾಗಾಗಿ ಯಾವ ರೀತಿಯಲ್ಲಿ ಕೃಷಿಯನ್ನು ಹಾನಿಕರವಲ್ಲದ ಉದ್ಯಮವನ್ನಾಗಿಸಬಹುದೆಂಬ ಚರ್ಚೆ ನಡೆಯಬೇಕಿದೆ. ಇಂದು ಶ್ರೀಮಂತಿಕೆ, ಹೆಸರು ಎಲ್ಲವೂ ನಗರದ-ಜೀವನ ಮಟ್ಟ ನೀಡಿದ್ದರು ಕೂಡ ಹಳ್ಳಿಯಲ್ಲಿ ನಡೆಸುವ ಕೃಷಿಯಲ್ಲಿ ಸಿಗುವಷ್ಟು ಸಂಭ್ರಮ, ನೆಮ್ಮದಿ ಬೇರೆಲ್ಲೂ ಸಾಧ್ಯವಿಲ್ಲ. ತಾನೊಬ್ಬ ಅಪ್ಪಟ ಕೃಷಿ ಕುಟುಂಬದಿಂದ ಬಂದಿರುವುದರಿಂದ ಇದರ ಅರಿವಿದೆ ಎಂದವರು ಹೇಳಿದರು.

3 ದಿನಗಳ ಕಾಲ ನಡೆಯಲಿರುವ ಈ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ದಕ್ಷಿಣಾ ಆಫ್ರಿಕಾ ಸೇರಿದಂತೆ 30 ಅಂತಾರಾಷ್ಟ್ರೀಯ ಪ್ರತಿನಿಧಿಗಳನ್ನೊಳಗೊಂಡು ಒಟ್ಟು 80 ಮಂದಿ ಪ್ರತಿನಿಧಿಗಳು ಭಾಗವಹಿಸುತ್ತಿದ್ದಾರೆ.

ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲರಾದ ಡಾ। ಉಮೇಶ್ ಎಂ. ಭೂಶಿ ಸ್ವಾಗತಿಸಿದರು. ವ್ಯವಹಾರಡಳಿತ ವಿಭಾಗದ ನಿರ್ದೇಶಕ ಡಾ। ಎ.ಪಿ. ಆಚಾರ್ ಸಮ್ಮೇಳನದ ಬಗ್ಗೆ ಮಾಹಿತಿ ನೀಡಿದರು. ಸಮ್ಮೇಳನದ ಸಂಯೋಜಕ ಪ್ರೊ। ಲೋಕೇಶ್ ವಂದಿಸಿದರು. ವ್ಯವಹಾರ ಆಡಳಿತ ವಿಭಾಗದ ಡಾ। ವಿಶಾಲ್ ಸಮರ್ಥ ನಿರೂಪಿಸಿದರು.